ಕರ್ನಾಟಕ ವಿಧಾನಸಭೆ

ಮಂಗಳವಾರ 24ನೇ ಜುಲೈ 2001 ರಂದು ಸದನವು ವಿಧಾನಸಭೆಯ ಸಭಾಂಗಣದಲ್ಲಿ ಬೆಳಿಗ್ಗೆ 10 ಗಂಟೆ 30 ನಿಮಿಷಕ್ಕೆ ಸಮಾವೇಷಗೊಂಡಿತು

ಅಧ್ಯಕ್ಷರಾದ ಶ್ರೀ ಎಂ.ವಿ. ವೆಂಕಟಪ್ಪ ಅವರು ಪೀಠದಲ್ಲಿ ಉಪಸ್ಥಿತರಿದ್ದರು.

1. ಪ್ರಶ್ನೋತ್ತರ

2. ಚುಕ್ಕೆ ಗುರ್ತಿನ ಪ್ರಶ್ನೆಗಳಿಗೆ ಸದನದಲ್ಲಿ ನೀಡಲಾದ ಉತ್ತರಗಳು

ಮೈಸೂರಿನಲ್ಲಿ ಮುಚ್ಚಲ್ಪಟ್ಟಿರುವ ಕಾರ್ಖಾನೆಗಳ ಪುನರಾರಂಭ.

265(3244) ಶ್ರೀ ಶಂಕರಲಿಂಗೇಗೌಡ ಹೆಚ್.ಎಸ್. (ನಾಮರಾಜ ವಿಧಾನಸಭಾ ಕ್ಷೇತ್ರ) :— ಮಾನ್ಯ ಭಾರಿ ಮತ್ತು ಮಧ್ಯಮ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಮೈಸೂರಿನ ಕೆ.ಆರ್. ಮಿಲ್ ಸೇರಿದಂತೆ ಮೈಸೂರಿನಲ್ಲಿನ ಯಾವ ಯಾವ ಕಾರ್ಖಾನೆಗಳು ಮುಚ್ಚಲ್ಪಟ್ಟಿವೆ?

ಆ) ಇದರಿಂದಾಗಿ ಬೀದಿಪಾಲಾದ ಕಾರ್ಮಿಕರ ಸಂಖ್ಯೆ ಎಷ್ಟು?

ಇ) ಈ ಕಾರ್ಖಾನೆಗಳು ಮತ್ತೆ ಪುನರಾರಂಭಿಸಲು ಸರ್ಕಾರದ ವತಿಯಿಂದ ಯಾವ ರೀತಿಯ ಪ್ರಯತ್ನಗಳನ್ನು ಕೈಗೊಳ್ಳಲಾಗಿದೆ.

ಈ) ಈ ಕಾರ್ಖಾನೆಗಳು ಮತ್ತೆ ಪುನರಾರಂಭವಾಗುವವೆ?

ಶ್ರೀ ಆರ್.ವಿ. ದೇಶಪಾಂಡೆ (ಭಾರಿ ಮತ್ತು ಮಧ್ಯಮ ಕೈಗಾರಿಕಾ ಸಚಿವರು) :—

ಅ) ಕೆ.ಆರ್. ಮಿಲ್ ಮುಚ್ಚಿಲ್ಲ. ಮೆ. ಆಟ್ಲಾಂಟಿಕ್ ಸ್ಪಿನ್ನಿಂಗ್ ಅಂಡ್ ವೀವಿಂಗ್ ಮಿಲ್ಸ್ ಲಿ. ಸುಮಾರು 126 ಮಂದಿ ಕಾರ್ಮಿಕರನ್ನು ಸೇರಿಸಿಕೊಂಡು 1996ರಿಂದ ಮಿಲ್‌ನ್ನು ನಡೆಸುತ್ತಿವೆ. ಮುಚ್ಚಿರುವ ಮುಖ್ಯ ಕೈಗಾರಿಕೆಗಳ ಸಂಖ್ಯೆ 13. ವಿವರಗಳನ್ನು ಅನುಬಂಧ - I ರಲ್ಲಿ ಕೊಟ್ಟಿದೆ.

ಆ) ಅನುಬಂಧ - I ರಲ್ಲಿ ತೋರಿಸಿರುವ ಮುಚ್ಚಲ್ಪಟ್ಟ ಕಾರ್ಖಾನೆಗಳ ಒಟ್ಟು ನೌಕರರ ಸಂಖ್ಯೆ 6728

ಇ) ಎಲ್ಲಾ ಮುಚ್ಚಿರುವ ಕೈಗಾರಿಕೆಗಳನ್ನು ಪುನ: ಪ್ರಾರಂಭಿಸಲು ರಾಜ್ಯ ಸರ್ಕಾರವು ತನ್ನ ಪ್ರಮಾಣ ಪ್ರಸ್ತಾಪದಂತೆ ಪರಿಹಾರ ಹಾಗೂ ರಿಯಾಯಿತಿಗಳನ್ನು ನೀಡಿ ಪ್ರಯತ್ನಿಸುತ್ತಿದೆ. ಮುಖ್ಯವಾಗಿ ಮೆ. ಐಡಿಯಲ್ ಜಾವಾ (ಇಂಡಿಯಾ) ಲಿ. ಇದನ್ನು ಪುನ: ಪ್ರಾರಂಭ ಮಾಡಲು ರಾಜ್ಯ ಸರ್ಕಾರವು ಎಲ್ಲಾ ಪ್ರಯತ್ನ ಮಾಡಿತು. ಕಂಪನಿಯ ಆಡಳಿತ ವರ್ಗವು ಇಂಡಿಯನ್ ಓವರ್‌ಸೀಸ್ ಬ್ಯಾಂಕಿಗೆ ಬಿ.ಐ.ಎಫ್.ಆರ್. ಮುಂದೆ ಒಪ್ಪಿಕೊಂಡಿದ್ದ ಹಣವನ್ನು ಪಾವತಿ ಮಾಡಲು (ಏಕ ಇಡುಗಂಟು ಪಾವತಿ) ವಿಫಲವಾದ್ದರಿಂದ ಬಿ.ಐ.ಎಫ್.ಆರ್. ಕಂಪನಿಯನ್ನು ಪರಿಸಮಾಪನೆ ಮಾಡಲು ಆದೇಶ ನೀಡಿದೆ. ಮೆ. ಕರ್ನಾಟಕ ಬಾಲ್ ಬೇರಿಂಗ್ ಕಾರ್ಪೋರೇಷನ್ ಮಾನ್ಯ ಹೈಕೋರ್ಟ್ ರಿಸೀವರ್ ವಶದಲ್ಲಿದೆ.

ಈ) ಉಳಿದ ಕಾರ್ಖಾನೆಗಳು ಮುಚ್ಚಿ ಅನೇಕ ವರ್ಷಗಳಾಗಿವೆ. ಕಾರ್ಖಾನೆಗಳನ್ನು ಪುನ: ಪ್ರಾರಂಭಿಸಲು ರಾಜ್ಯ ಸರ್ಕಾರ ತನ್ನ ಎಲ್ಲಾ ಪ್ರಯತ್ನಗಳನ್ನು ಹೊಸ ಕೈಗಾರಿಕಾ ನೀತಿಯಂತೆ ಪರಿಹಾರ ಹಾಗೂ ರಿಯಾಯಿತಿಗಳನ್ನು ನೀಡುವ ಮೂಲಕ ಮುಂದುವರಿಸುತ್ತಿದೆ.

PARTICULARS OF LARGE AND MEDIUM SCALE INDUSTIRES IN MYSORE DISTRICT
(CLOSED UNITS)

Sl. No.	Name & address of the Unit	End Product	Employment
1.	ORR CEE Electronics Ltd., No. 45, KRS Road, Metagalli, Mysore	Plastic Film Capacitors	90
2.	AES Chemicals Pvt. Ltd., Hootagalli 1A, Mysore	Potasium Chloride	115
3.	Jay Electric Wire Corporation Ltd., KRS Road, Metagalli, Mysore	Tungsten Filaments	213
4.	Alpa Die Cast Pvt. Ltd., Hootagalli Indl. Area, Mysore	Die Casting Sheet Metal Components	45
5.	Karnataka Ball Bearing Corpn., Plot No.21, Belavadi Indl. Area, Mysore	Taper, Roller, Cylindrical Bearings	406

1	2	3	4
6.	Machinery Mfrs. Corporation Belavadi Indl. Area, Mysore	Textile Machine Spindle Frames	850
7.	Ideal Jawa (India) Ltd., Yadavagiri Indl. Estate, Mysore	Motor Cycles & Spares	2026
8.	SRP Mills, Mysore	Manmade fibre Yarn	1011
9.	Mysore Resins & Chemicals Ltd., Mysore	Silk cloth Formal Dehyde	1161
10.	Jay Needle Bearings, Plot No.21A, Belavadi Indl. Area, Mysore	Needle/Roller Bearings	234
11.	Diamond Dies Mfg. Co. Ltd., Plot No. 48, Metagalli Indl. Mysore	Wire Drawing Diamond Dies	128
12.	Veekayar Rubber Mfg., Co. Hebbal Indl. Area, Mysore	Rubber Mixing	49
13.	Reining Lighting (India) Ltd., Indl. Suburb Mysore South Mysore	Compact Fluorocent Tubes	-

ಅಧ್ಯಕ್ಷರು :— ಮಾನ್ಯ ದೇಶಪಾಂಡೆಯವರೇ, ಮಾನ್ಯ ಸದಸ್ಯರಾದ ಶಂಕರಲಿಂಗೇಗೌಡರು ಏನೋ ಕೆಲಸದ ನಿಮಿತ್ತ ಹೋಗಬೇಕಂತೆ ಅವರ ಪ್ರಶ್ನೆಯನ್ನು ಮೊದಲು ತೆಗೆದುಕೊಳ್ಳೋಣ.

ಶ್ರೀ ಹೆಚ್.ಎಸ್. ಶಂಕರಲಿಂಗೇಗೌಡ :— ಮಾನ್ಯ ಅಧ್ಯಕ್ಷರೆ, ಮೈಸೂರು ನಗರದಲ್ಲಿ ಸುಮಾರು ಆರು ಸಾವಿರ ಜನ ನೌಕರರು ಬೀದಿಪಾಲಾಗಿದ್ದಾರೆ. ಅವರನ್ನು ನಂಬಿರತಕ್ಕ ಅವರ ಕುಟುಂಬ ತುಂಬಾ ಶೋಚನೀಯ ಸ್ಥಿತಿಯಲ್ಲಿದೆ. ಕಳೆದ ಬಾರಿ ಮಾನ್ಯ ದೇಶಪಾಂಡೆಯವರು ದೇಶಾವರಿ ನಗೆಬೀರಿ ಜಾವಾ ಕಂಪನಿಯನ್ನು ಓಪನ್ ಮಾಡುತ್ತೇವೆಂದು ಆಶ್ವಾಸನೆ ಕೊಟ್ಟಿದ್ದರು. ಅವರು ಕೊಟ್ಟಂತಹ ಆಶ್ವಾಸನೆ ಆಶ್ವಾಸನೆಯಾಗಿಯೇ

ಉಳಿದಿದೆ. ಇವತ್ತು ಮಾನ್ಯ ಕೃಷ್ಣಾರವರ ಮಂತ್ರಿಮಂಡಲದಲ್ಲಿ ಮಂತ್ರಿಗಳು ಬೆರಳೆಣಿಸುವಷ್ಟು ಮಾತ್ರ ಕೆಲಸ ಮಾಡುತ್ತಿದ್ದಾರೆ. ಕೆಲವರು ಕೃಷ್ಣಾರವರ ಮುಖಕ್ಕೆ ಮಸಿ ಬಳಿಯುತ್ತಿದ್ದಾರೆ. ಖಂಡಿತವಾಗಿಯೂ ಕೃಷ್ಣಾರವರ ಮುಖಕ್ಕೆ ಮಸಿ ಬಳಿಯತಕ್ಕ ಕೆಲಸ ಮಾಡುತ್ತಿದ್ದಾರೆ.

ಅಧ್ಯಕ್ಷರು :— ಆ ವಿಷಯ ಬಿಟ್ಟು ಕಾರ್ಯಾನೆ ಪ್ರಾರಂಭ ಮಾಡುವುದಕ್ಕೆ ಹೇಳಿ.

ಶ್ರೀ ಹೆಚ್.ಎಸ್. ಶಂಕರಲಿಂಗೇಗೌಡ :— ಕೊಟ್ಟಂತಹ ಆಶ್ವಾಸನೆಯನ್ನು ಈಡೇರಿಸದಿದ್ದರೆ ಪ್ರಯೋಜನ ಏನು ಬಂತು? ಕಳೆದ ಸಾರಿ ಜಾವಾ ಕಾರ್ಖಾನೆ ತರೆಯುತ್ತೇವೆಂದು ಹೇಳಲಿಲ್ಲವೇ? ಈಗ ಆರು ಸಾವಿರ ಜನ ನೌಕರರ ಗತಿಯೇನು? ಕಳೆದ ಸಾರಿ ಕೊಟ್ಟಂತಹ ಆಶ್ವಾಸನೆಯನ್ನು ಅನುಷ್ಠಾನಕ್ಕೆ ತರುವಲ್ಲಿ ಅವರು ವಿಫಲರಾಗಿದ್ದಾರೆ. ಮಾನ್ಯ ದೇಶಪಾಂಡೆಯವರು ನಿಜವಾಗಿಯೂ ಕೂಡ ಸರಿಯಾಗಿ ಕೆಲಸ ಮಾಡುತ್ತಿಲ್ಲ. ಬಹುತೇಕ ಮಂತ್ರಿಗಳು ಕೃಷ್ಣಾರ ಮುಖಕ್ಕೆ ಮಸಿ ಬಳಿಯುತ್ತಿದ್ದಾರೆ.

ಅಧ್ಯಕ್ಷರು :— ಮಂತ್ರಿಗಳು ಉತ್ತರ ಹೇಳಿ. ಪ್ರಶ್ನೆ ಇರುವುದು ಕಾರ್ಖಾನೆ ಓಪನ್ ಮಾಡುವ ಬಗ್ಗೆ ಬಹುತೇಕ ಮಂತ್ರಿಗಳ ಬಗ್ಗೆ ಏಕೆ ಮಾತನಾಡುತ್ತೀರಿ?

ಶ್ರೀ ಹೆಚ್.ಎಸ್. ಶಂಕರಲಿಂಗೇಗೌಡ :— ಸಾವಿರ ಜನ ಕಾರ್ಮಿಕರು ಮನೆಯ ಹತ್ತಿರ ಬಂದು ಗಲಾಟೆ ಮಾಡುತ್ತಿದ್ದಾರೆ. ನನಗೆ ಬೇಜಾರಾಗುತ್ತದೆ ಸ್ವಾಮಿ. ಕಳೆದ ಏಳು ವರ್ಷಗಳಿಂದ ಇದೇ ತರಹ ಆಶ್ವಾಸನೆಯನ್ನು ಸರ್ಕಾರಗಳು ಕೊಡುತ್ತಾ ಬಂದಿವೆ.

ಅಧ್ಯಕ್ಷರು :— ಅದು ಸಚಿವಸಂಪುಟಕ್ಕೆ ಸಂಬಂಧಪಟ್ಟ ವಿಚಾರ. ನೀವು ಬಹುತೇಕ ಮಂತ್ರಿಗಳ ಬಗ್ಗೆ ಮಾತನಾಡಬೇಡಿ. ಇಲ್ಲಿ ಯಾರು ಫೇಲ್ಯೂರ್ ಆಗಿದ್ದಾರೆ ಅವರ ಬಗ್ಗೆ ಮಾತನಾಡಿ.

ಶ್ರೀ ಹೆಚ್.ಎಸ್. ಶಂಕರಲಿಂಗೇಗೌಡ :— ಪ್ರಿವಿಲೇಜ್ ಮೋಷನ್ ಮೂವ್ ಮಾಡುವುದಕ್ಕೆ ಅವಕಾಶ ಕೊಡಿ.

ಶ್ರೀ ಆರ್.ವಿ. ದೇಶಪಾಂಡೆ :— ಮಾನ್ಯ ಅಧ್ಯಕ್ಷರೆ, ನಾನು ಕೆಲಸ ಮಾಡುತ್ತಿದ್ದೆನೆಯೋ ಇಲ್ಲವೋ ಎನ್ನುವುದನ್ನು ಮಾನ್ಯ ಮುಖ್ಯಮಂತ್ರಿಗಳು ನೋಡುತ್ತಾರೆ. ಜನ ನಿರ್ಣಯ ಮಾಡುತ್ತಾರೆ. ನಿಮ್ಮ ಕಡೆಯಿಂದ ನನಗೆ ಸರ್ಟಿಫಿಕೇಟ್ ಬೇಡ. ನೀವು ಮಾತನಾಡುವಾಗ ನಾನು ಮಾತನಾಡಿಲ್ಲ. ತಾವು ಸುಮ್ಮನೆ ಕೂಡಬೇಕು. ನನಗೆ ಉತ್ತರ ಕೊಡುವ ಅಧಿಕಾರವಿದೆ. ನಿಮಗೆ ಪ್ರಶ್ನೆ ಕೇಳುವ ಅಧಿಕಾರವಿದೆ. ನಾನು ಈ ಸದನದಲ್ಲಿ ಕಳೆದ 20 ವರ್ಷಗಳಿಂದ ಕೆಲಸ ಮಾಡುತ್ತಿದ್ದೇನೆ. ನಿಮಗೇನು ಗೊತ್ತಿದೆ ಸುಮ್ಮನೆ ಕೂಡಿ.

MR. SPEAKER :— We are not examining the working of the ministry.

Sri. R.V. Deshpande :— I want to tell one thing. Don't discuss character of myself. You can discuss on the question.

Sri H.S. Shankaralinge Gowda :— I am not questioning your character.

ಅಧ್ಯಕ್ಷರು :— ಉಪಾಯದಿಂದ ಪ್ರಶ್ನೆ ಕೇಳಿ ಕೆಲಸ ಮಾಡಿಸಿಕೊಳ್ಳಿ. ಏನೇನೋ ಕೇಳಬೇಡಿ.

ಶ್ರೀ ಆರ್.ವಿ. ದೇಶಪಾಂಡೆ :— ಮಾನ್ಯ ಅಧ್ಯಕ್ಷರೆ, 10 ಭಾರೀ ಮತ್ತು ಮಧ್ಯಮವರ್ಗದ 13 ಕೈಗಾರಿಕೆಗಳು ಪ್ರೈವೇಟ್ ಸೆಕ್ಟಾರ್‌ನಲ್ಲಿ ಅನಾರೋಗ್ಯವಾಗಿವೆ. ಅದರಲ್ಲಿ ಕೆ.ಆರ್.ಮಿಲ್ ಅನಾರೋಗ್ಯವಾಗಿದ್ದು ಅದು ಕೆಲಸ ಮಾಡಲಿಕ್ಕೆ ಆರಂಭವಾಗಿದೆ. ಅದು ಕ್ಲೋಸ್ ಆಗಿಲ್ಲ. ಇಲ್ಲಿ ಮಾಹಿತಿಯ ಪ್ರಕಾರ ಕ್ಲೋಸ್‌ಯೆಂದು ಇದೆ, ಅದು ಓಪನ್ ಆಗಿದೆ, ಅದನ್ನು ಪ್ರಾರಂಭ ಮಾಡಿದ್ದೇವೆ ಜನ ಅಲ್ಲಿ ಕೆಲಸ ಮಾಡುತ್ತಿದ್ದಾರೆ. ಅದೇ ಪ್ರಕಾರ ಮತ್ತೊಂದು ಕೈಗಾರಿಕೆ ಐಡಿಯಲ್ ಜಾವಾ ಇದನ್ನು ಪ್ರಾರಂಭ ಮಾಡಲಿಕ್ಕೆ ಎಲ್ಲಾ ರೀತಿಯಿಂದ ನಾವು ಪ್ರಯತ್ನ ಮಾಡಿದ್ದೇವೆ. ಸರ್ಕಾರದಿಂದ ಎಲ್ಲಾ ರೀತಿಯ ಸಹಾಯ ಮತ್ತು ಸಹಕಾರ ಕೊಟ್ಟು ಇಂಡಿಯನ್ ಬ್ಯಾಂಕಿನವರ ಜೊತೆ ಚರ್ಚೆ ಮಾಡಿದ್ದೇವೆ. ಆದರೆ ಪಾರ್ಟಿ ಸೆಟಲ್‌ಮೆಂಟ್‌ಗೆ ಮುಂದೆ ಬಂದಿಲ್ಲ. ಹಾಗಾಗಿ ಸರ್ಕಾರ ಏನೂ ಮಾಡಲಿಕ್ಕೆ ಆಗಲಿಲ್ಲ. ಇವತ್ತು ಯಾವುದೇ ಒಂದು ಅನಾರೋಗ್ಯವಾಗಿರತಕ್ಕ ಕೈಗಾರಿಕೆಯನ್ನು ಆರೋಗ್ಯಕರವಾಗಿ ಮಾಡಬೇಕಾದರೆ ಸರ್ಕಾರದ ಕಡೆಯಿಂದ ಅಷ್ಟೇ ಮಾಡುವುದಕ್ಕಾಗುವುದಿಲ್ಲ. ಪ್ರೈವೇಟ್ ಸೆಕ್ಟಾರ್‌ನಲ್ಲಿ ಯಾರು ಮಾಲೀಕರು ಇದ್ದಾರೆ ಅವರು ಮುಂದೆ ಬರಬೇಕಾಗುತ್ತದೆ. ಅವರು ಪ್ರಮೋಟರ್ಸ್ ಕಾಂಟ್ರಿಬ್ಯೂಷನ್ ತರಬೇಕಾಗುತ್ತದೆ. ಕೇವಲ ಸರ್ಕಾರ ಅಲ್ಲ ಬ್ಯಾಂಕು ಹಣಕಾಸು ಸಂಸ್ಥೆಗಳಿವೆ. ಇವೆಲ್ಲಾ ಕೆಲಸ ಮಾಡಬೇಕಾಗುತ್ತದೆ. ಸರ್ಕಾರ ಮಾಡಲ್ ಸಪೋರ್ಟ್ ಕೊಡಬೇಕು. ಏನು ಅತಿಹೆಚ್ಚು ರಿಯಾಯ್ತಿ ಕೊಡುವುದಕ್ಕೆ ಸಾಧ್ಯವಿದೆಯೋ ಅದನ್ನು ಕೊಡಬಹುದೇ ವಿನಹ ಇವತ್ತು ಬ್ಯಾಂಕುಗಳು, ಕೈಗಾರಿಕೆ ಮಾಲೀಕರು ಮತ್ತು ಸರ್ಕಾರ ಕೂಡಿಯೇ ಈ ಕೆಲಸ ಮಾಡಬೇಕಾಗುತ್ತದೆ. ಇದು ಒನ್‌ವೇ ಟ್ರಾಫಿಕ್ ಆಗುವುದಕ್ಕೆ ಸಾಧ್ಯವಾಗುವುದಿಲ್ಲ. ಅಧ್ಯಕ್ಷರೇ, ಇವತ್ತು ಮೈಸೂರಿನಲ್ಲಿ ಕೈಗಾರಿಕೆ ಬೆಳವಣಿಗೆಗೆ ಸಾಕಷ್ಟು ಅವಕಾಶ ಇದೆ. ಹಲವಾರು ಒಳ್ಳೆಯ ಕೈಗಾರಿಕೆಗಳು ಅಲ್ಲಿ ಪ್ರಾರಂಭವಾಗಿದೆ. ಅಲ್ಲಿ ಇನ್‌ಫೋಸಿಸ್ ಪ್ರಾರಂಭವಾಗಿದೆ. ಅವರಿಗೆ ಇನ್ನೂರು ಎಕರೆ ಜಮೀನು ಕೊಟ್ಟಿದ್ದು, ಈಗ ಅಲ್ಲಿ ಕೆಲಸ ಪ್ರಾರಂಭವಾಗಿದೆ. ಹಾಗೆಯೇ ವಿಪ್ರೊ

ಕೂಡ ಅಲ್ಲಿಗೆ ಹೋಗಿದೆ. ಸಾಧಾರಣ ಹದಿಮೂರು ಎಲೆಕ್ಟ್ರಿಕ್ ಇಂಡಸ್ಟ್ರೀಗಳು ಮೈಸೂರಿನಲ್ಲಿ ಬಹಳ ಒಳ್ಳೆಯ ಕೆಲಸ ಮಾಡುತ್ತಿದ್ದು, ಐದುನೂರು ಕೋಟಿ ರೂ.ಗಳಿಗಿಂತ ಹೆಚ್ಚು ರಫ್ತು ಮಾಡುತ್ತಿದ್ದಾರೆ. ಸಾಫ್ಟ್‌ವೇರ್ ಪಾರ್ಕ್ ಕೂಡ ಇವತ್ತು ಮೈಸೂರಿನಲ್ಲಿ ಆಗಿದೆ. ಹಾಗಾಗಿ ನಾನು ಅವರು ಹೇಳಿದ್ದನ್ನು ಅರ್ಥಮಾಡಿಕೊಳ್ಳುತ್ತೇನೆ. ಕೈಗಾರಿಕೆ ಅನಾರೋಗ್ಯಕರವಾಗಿದೆ, ಆರು ಸಾವಿರ ಜನರು ಉದ್ಯೋಗಾವಕಾಶ ಕಳೆದುಕೊಂಡಿದ್ದಾರೆ. ಅವರ ಕಷ್ಟವನ್ನು ನಾನು ಅರ್ಥಮಾಡಿಕೊಳ್ಳುತ್ತೇನೆ. ಆದರೆ ಈ ಸಮಸ್ಯೆಯನ್ನು ಬಗೆಹರಿಸಬೇಕಾದರೆ ಕೇವಲ ಸರ್ಕಾರದಿಂದ ಇದನ್ನು ಮಾಡುವುದಕ್ಕೆ ಆಗುವುದಿಲ್ಲ. ಹಾಗಾಗಿ ನಮ್ಮ ಹೊಸ ಕೈಗಾರಿಕೆ ನೀತಿಯಲ್ಲಿ....

ಶ್ರೀ ಹೆಚ್.ಎಸ್. ಶಂಕರಲಿಂಗೇಗೌಡ :— ಸಬ್ಸಿಡಿ ಎಷ್ಟು ಕೊಟ್ಟಿದ್ದೀರಿ?

ಶ್ರೀ ಆರ್.ವಿ. ದೇಶಪಾಂಡೆ :— ಸಬ್ಸಿಡಿಯನ್ನು ಸಣ್ಣ ಕೈಗಾರಿಕೆಗಳಿಗೆ ಕೊಡುತ್ತೇವೆ.

(ಗೊಂದಲ)

ಅಧ್ಯಕ್ಷರು :— ಸ್ವಲ್ಪ ಸಾವಧಾನವಾಗಿ ಕೇಳಿ. ಯಾಕೆ ಇಷ್ಟು ಕೋಪ ಮಾಡಿಕೊಳ್ಳುತ್ತೀರಿ?

ಶ್ರೀ ಹೆಚ್.ಎಸ್. ಶಂಕರಲಿಂಗೇಗೌಡ :— ನಾನು ಮಾತನಾಡುವುದೇ ಹೀಗೆ. ಉತ್ತಮನ ಕೋಪ ಒಂದು ಘಳಿಗೆ, ಮಧ್ಯಮನ ಕೋಪ ಎರಡುಗಳಿಗೆ, ಪಾಪಿಯ ಕೋಪ ಸಾಯುವತನಕ ಎಂದು ಇದೆ. ನಾನು ಎರಡನೇಯವನು. ನಾನು ಮಹಾಪಾಪಿಷ್ಟ ಅಲ್ಲ. ಉತ್ತಮ ಮಧ್ಯಮದಲ್ಲಿ ನಾನು ಇದ್ದೇನೆ. ನಾನು ಮಾತನಾಡುವ ರೀತಿಯೇ ಹಾಗಿದೆ. ಏನು ಮಾಡುವುದು?

ಅಧ್ಯಕ್ಷರು :— ಅದನ್ನು ಸ್ವಲ್ಪ ಸರಿಪಡಿಸಿಕೊಳ್ಳಿ.

ಶ್ರೀ ಯು.ಆರ್. ಸಭಾಪತಿ :— ಕವನ ರೂಪದಲ್ಲಿ ಪ್ರಶ್ನೆ ಕೇಳುವುದಕ್ಕೆ ಅವರಿಗೆ ಹೇಳಿ.

ಶ್ರೀ ಆರ್.ವಿ. ದೇಶಪಾಂಡೆ :— ಹಾಗಾಗಿ ಇವತ್ತು ಕೇವಲ ಕರ್ನಾಟಕದಲ್ಲಿ ಅಷ್ಟೇ ಅಲ್ಲ ನಮ್ಮ ದೇಶದಲ್ಲಿ, ವಿಶ್ವದಲ್ಲಿ ಮಾನ್ಯುಫ್ಯಾಕ್ಚರಿಂಗ್ ಇಂಡಸ್ಟ್ರೀಸ್ ಅನಾರೋಗ್ಯವಾಗಿವೆ, ಸ್ಲೋಡೌನ್‌ಗೆ ಬಂದಿದೆ. ಆದ್ದರಿಂದ ಯಾವಾಗಲೂ ಮಾಸಿ ಮಾಡುವುದಕ್ಕಿಂತ ಮುಂಜಾಗ್ರತೆ ಒಳ್ಳೆಯದೆಂದು ಹೇಳಿ ಮಾನ್ಯ ಮುಖ್ಯಮಂತ್ರಿಗಳು ಮನಸ್ಸು ಮಾಡಿ ನಮ್ಮ ಹೊಸ ಕೈಗಾರಿಕಾ ನೀತಿಯನ್ನು ನಾವು ತಂದಿದ್ದೇವೆ. ಈ ನಿಟ್ಟಿನಲ್ಲಿ ಸಣ್ಣ, ಮಧ್ಯಮ ಮತ್ತು ದೊಡ್ಡ ಕೈಗಾರಿಕೆಗಳು ಅನಾರೋಗ್ಯವಾದಾಗ ಯಾವ ಪ್ರಕಾರ ಅವರಿಗೆ ಸಹಾಯ ಮಾಡಬೇಕು ಎನ್ನುವುದಕ್ಕೆ ಪ್ಯಾಕೇಜ್‌ನ್ನು ನಾವು ಇದರಲ್ಲಿ

ಕೊಟ್ಟಿದ್ದೇವೆ. ಆದರೆ ಮುಖ್ಯವಾಗಿ ಅದು ಸಣ್ಣ ಕೈಗಾರಿಕೆ ಇರಬಹುದು, ಮಧ್ಯಮ ಕೈಗಾರಿಕೆ ಇರಬಹುದು ಮತ್ತು ದೊಡ್ಡ ಕೈಗಾರಿಕೆ ಇರಬಹುದು, ಕೈಗಾರಿಕೆಗಳು ಅನಾರೋಗ್ಯವಾದಾಗ ಇಲಾಖೆಯಿಂದ ಏನು ಮಾಡಬಹುದು ಅದನ್ನು ಖಂಡಿತವಾಗಿಯೂ ನಾವು ಮಾಡುತ್ತೇವೆ. ತಮಗೆ ಮತ್ತೊಂದು ವಿಚಾರವನ್ನು ಹೇಳಬೇಕಾದರೆ ಟೆಕ್ನಾಲಜಿ ಅಪ್-ಗ್ರೇಡೇಷನ್ ಫಂಡ್ ಎಂದು ಹೇಳಿ ಮೊದಲನೇ ಬಾರಿಗೆ ರಾಜ್ಯದಲ್ಲಿ ಸಣ್ಣ ಮತ್ತು ಮಧ್ಯಮ ಕೈಗಾರಿಕೆಗಳು ಆರೋಗ್ಯಕರ ಇರಬಹುದು ಅಥವಾ ಅನಾರೋಗ್ಯ ಕೈಗಾರಿಕೆ ಆರೋಗ್ಯಕರವಾಗುವ ಪರಿಸ್ಥಿತಿ ಇದ್ದರೆ ನಾಲ್ಕು ಪರ್ಸೆಂಟ್ ಸಬ್ಸಿಡಿಯನ್ನು ಕೊಡುವ ನಿರ್ಣಯ ಮಾಡಿದ್ದೇವೆ. ಇದು ಟೆಕ್ನಾಲಜಿಯನ್ನು ಅಪ್-ಗ್ರೇಡ್ ಮಾಡುವುದಕ್ಕಾಗಿ ಕ್ರಮ ತೆಗೆದುಕೊಂಡಿರುವಂಥಾದ್ದು. ಹಾಗಾಗಿ ಸರ್ಕಾರ ಇವತ್ತು ಮುಖ್ಯವಾಗಿ ಕೈಗಾರಿಕೆಗಳು ಆರೋಗ್ಯಕರವಾಗಿರಬೇಕು ಎನ್ನುವ ದೃಷ್ಟಿಯಿಂದ ಹಲವಾರು ಕಾರ್ಯಕ್ರಮಗಳನ್ನು ತೆಗೆದುಕೊಳ್ಳುತ್ತಿದೆ. ಮತ್ತೊಂದು ಕ್ರಮ ಏನು ತೆಗೆದುಕೊಳ್ಳುತ್ತಿದ್ದೇವೆ ಎಂದರೆ ಸಣ್ಣ ಕೈಗಾರಿಕೆಗಳ ಬಗ್ಗೆ ಒಂದು ಇಂಡಿಪೆಂಡೆಂಟ್ ಏಜೆನ್ಸಿ ಕಡೆಯಿಂದ ಅದರ ಬಗ್ಗೆ ಅಧ್ಯಯನ ಮಾಡಿಸುತ್ತಿದ್ದೇವೆ. ಸಣ್ಣ ಕೈಗಾರಿಕೆಗಳು ರಾಜ್ಯದಲ್ಲಿ ಏನಿವೆ ಅವು ಅನಾರೋಗ್ಯಕರವಾದರೆ ಅವನ್ನು ಆರೋಗ್ಯಕರವಾಗಿ ಮಾಡಬೇಕಾದರೆ ಏನು ಮಾಡಬಹುದು, ಅದಕ್ಕೆ ಎಂಪ್ಲಾಯ್‌ಮೆಂಟ್ ಬೇಸ್ಡ್ ಇನ್‌ಸೆಂಟೀವ್ಸ್ ಕೊಡುವುದಕ್ಕೆ ಏನು ಸಾಧ್ಯವಿದೆ ಎಂದು ಇದರ ಬಗ್ಗೆ ಅಧ್ಯಯನವನ್ನು ನಡೆಸಲಾಗುತ್ತಿದ್ದು ಅದನ್ನು ಬರುವ ಆರೇಳು ತಿಂಗಳಲ್ಲಿ ಮುಗಿಸುತ್ತಿದ್ದೇವೆ. ಕೇಂದ್ರ ಸರ್ಕಾರದ ಸ್ಯಾಂಪಲ್ ಸರ್ವೆ ಪ್ರಕಾರ ಶೇಕಡಾ 5(ರಷ್ಟು ಸಣ್ಣ ಕೈಗಾರಿಕೆಗಳು ರೋಗಗ್ರಸ್ತವಾಗಿವೆ. ಹಾಗಾಗಿ ಕೈಗಾರಿಕೆ ಅನಾರೋಗ್ಯಕರವಾಗಿದ್ದರೆ ಬಗ್ಗೆ ನಮಗೇನೂ ಅಭಿಮಾನ ಇಲ್ಲ, ನಮಗೂ ಕೂಡ ನೋವಾಗಿದೆ. ಸರ್ಕಾರ ಎಲ್ಲಾ ರೀತಿಯ ಪ್ರಯತ್ನ ಮಾಡುತ್ತಿದೆ ಮತ್ತು ಮುಂದೆ ಕೂಡ ನಾವು ಎಲ್ಲಾ ರೀತಿಯಿಂದ ಪ್ರಯತ್ನ ಮಾಡುತ್ತೇವೆ ಎಂದು ಮಾನ್ಯ ಗೌರವಾನ್ವಿತ ಸದಸ್ಯರಿಗೆ ಭರವಸೆ ಕೊಡುತ್ತಿದ್ದೇವೆ.

ಶ್ರೀ ಹೆಚ್.ಎಸ್. ಶಂಕರಲಿಂಗೇಗೌಡ :— ಪ್ರಾವಿಡೆಂಟ್‌ಫಂಡ್ ಹಣವನ್ನು ಮಾಲೀಕರಿಂದ ವಾಪಸ್ಸು ಕೊಡಿಸುವುದಕ್ಕೆ ಏನು ಮಾಡುತ್ತೀರಿ?

ಶ್ರೀ ಆರ್.ವಿ. ದೇಶಪಾಂಡೆ :— ಪ್ರಾವಿಡೆಂಟ್‌ಫಂಡ್ ಹಣ ಕೊಟ್ಟಿಲ್ಲವೆಂದರೆ ಪ್ರಾವಿಡೆಂಟ್‌ಫಂಡ್ ಕಮೀಷನರ್ ಇದ್ದಾರೆ, ಅವರು ಕ್ರಮ ತೆಗೆದುಕೊಳ್ಳುತ್ತಾರೆ.

(ಗೊಂದಲ)

ಶ್ರೀ ಹೆಚ್.ಎಸ್. ಶಂಕರಲಿಂಗೇಗೌಡ :— ಅವರು ಹಣ ತಿಂದುಹಾಕಿದ್ದಾರೆ.

ಶ್ರೀ ಆರ್.ವಿ. ದೇಶಪಾಂಡೆ :— ಪ್ರಾವಿಡೆಂಟ್‌ಫಂಡ್ ಹಣವನ್ನು ಯಾರು ತಿಂದುಹಾಕಿದ್ದಾರೆಂದು ಸರ್ಕಾರದ ಗಮನಕ್ಕೆ ತಂದರೆ ಖಂಡಿತವಾಗಿ ಅವರ ಮೇಲೆ ಕ್ರಮ

ತೆಗೆದುಕೊಳ್ಳುವುದಕ್ಕೆ ನಾನು ಹೇಳುತ್ತೇನೆ. ಅದರ ಬಗ್ಗೆ ಕಾರ್ಮಿಕ ಇಲಾಖೆ ಕ್ರಮ ತೆಗೆದುಕೊಳ್ಳುತ್ತದೆ.

ಅಧ್ಯಕ್ಷರು :— ನೀವು ಪತ್ರ ಬರೆಯಿರಿ.

ಶ್ರೀ ಆರ್.ವಿ. ದೇಶಪಾಂಡೆ :— ನನಗೆ ಪತ್ರ ಬರೆಯಿರಿ ಮತ್ತು ಕಾರ್ಮಿಕ ಇಲಾಖೆಯವರಿಗೂ ಪತ್ರ ಬರೆಯಿರಿ.

ಚಾಮರಾಜನಗರ ಜಿಲ್ಲೆಯಲ್ಲಿ ಜಲಸಂವರ್ಧನೆ ಯೋಜನೆಯಡಿ ಕೆರೆಗಳ ಹೂಳೆತ್ತುವುದು.

256(2833) ಶ್ರೀ ಗುರುಸ್ವಾಮಿ ಸಿ. (ಚಾಮರಾಜನಗರ) :— ಮಾನ್ಯ ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಜಲಸಂವರ್ಧನೆ ಯೋಜನೆಯಡಿ ಚಾಮರಾಜನಗರ ಜಿಲ್ಲೆಯಲ್ಲಿರುವ ಕೆರೆಗಳಲ್ಲಿನ ಹೂಳೆತ್ತುವ ಕೆಲಸವನ್ನು ಸರ್ಕಾರ ಕೈಗೆತ್ತಿಕೊಳ್ಳಲಾಗಿದೆಯೆ;

ಆ) ಹಾಗಿದ್ದಲ್ಲಿ ಕ್ಷೇತ್ರವಾರು ಮಾಹಿತಿ ನೀಡುವುದು.

ಶ್ರೀ ಎಸ್.ಎಂ. ಕೃಷ್ಣ (ಮುಖ್ಯಮಂತ್ರಿಗಳು) :—

ಅ) ಇನ್ನೂ ನಿರ್ಧರಿಸಿರುವುದಿಲ್ಲ.

ಆ) ಉದ್ಭವಿಸುವುದಿಲ್ಲ.

ಶ್ರೀ ಸಿ. ಗುರುಸ್ವಾಮಿ :— ಮಾನ್ಯ ಅಧ್ಯಕ್ಷರೇ, "ಜಲಸಂವರ್ಧನೆ ಯೋಜನೆಯಡಿ ಚಾಮರಾಜನಗರ ಜಿಲ್ಲೆಯಲ್ಲಿರುವ ಕೆರೆಗಳಲ್ಲಿನ ಹೂಳೆತ್ತುವ ಕೆಲಸವನ್ನು ಸರ್ಕಾರ ಕೈಗೆತ್ತಿಕೊಳ್ಳಲಾಗಿದೆಯೆ?" ಎಂದು ನನ್ನ ಪ್ರಶ್ನೆ ಇರುವಂಥಾದ್ದು. ಅದಕ್ಕೆ "ಇನ್ನೂ ನಿರ್ಧರಿಸಿರುವುದಿಲ್ಲ" ಎಂದು ಉತ್ತರವನ್ನು ಕೊಟ್ಟಿದ್ದಾರೆ. ಈ ಉತ್ತರದಿಂದ ನನಗೆ ಬಹಳ ನೋವಾಗಿದೆ. ಕಾರಣ ಏನೆಂದರೆ ಮಾನ್ಯ ಮುಖ್ಯಮಂತ್ರಿಗಳು ಎರಡು ವರ್ಷದ ಅವಧಿಯಲ್ಲಿ ಜನಹಿತ ಕಾರ್ಯಕ್ರಮಗಳನ್ನು ಏನು ಹಾಕಿಕೊಂಡಿದ್ದಾರೆ, ಅದರಲ್ಲಿ ನಾನು ಪ್ರಶಂಸೆ ಮಾಡಿರತಕ್ಕದ್ದು ಈ ಜಲಸಂವರ್ಧನೆ ಯೋಜನೆಯನ್ನು, ಇದು ನಿಜವಾಗಿಯೂ ಸ್ವಾಗತಾರ್ಹ ಮತ್ತು ಜನ ಮೆಚ್ಚತಕ್ಕಂಥ ಕಾರ್ಯಕ್ರಮ. ಈ ಕಾರ್ಯಕ್ರಮವನ್ನು ಮುಖ್ಯಮಂತ್ರಿಗಳು ಶೀಘ್ರಗತಿಯಲ್ಲಿ ಮೊದಲ ಆದ್ಯತೆಮೇಲೆ ತೆಗೆದುಕೊಳ್ಳತಕ್ಕದ್ದು ಬಹಳ ಮುಖ್ಯವಾಗಿರತಕ್ಕದ್ದು. ನಾನು ಉಪಪ್ರಶ್ನೆ ಕೇಳುವುದು ಏನೆಂದರೆ ಈಗ ಚಾಮರಾಜನಗರ ಜಿಲ್ಲೆ ಮಾತ್ರ ನಿರ್ಧಾರವಾಗಿಲ್ಲವೆಂದು ಹೇಳುತ್ತೀರೋ ಅಥವಾ ಇಡೀ ರಾಜ್ಯದಲ್ಲಿಯೇ